# ಹರಿಕಥಾಮೃತಸಾರ - ೧೯

## ಕರ್ಮ ವಿಮೋಚನ ಸಂಧಿ

ಹರಿಕಥಾಮೃತಸಾರ ಗುರುಗಳ | ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಮೂಲನಾರಾಯಣನು ಮಾಯಾಲೋಲಾನುತವತಾರನಾಮಕ |
ವ್ಯಾಳ ರೂಪ ಜಯಾರಮಣನಾವೇಶನೆನಿಸುವನು ||
ಲೀಲೆಗೈವಾನಂತಚೇತನಜಾಲದೊಳು ಪ್ರದ್ಯುಮ್ನ ಬ್ರಹ್ಮಾಂ |
ಡಾಲಯದ ಒಳಹೊರಗೆ ನೆಲೆಸಿಹ ಶಾಂತಿ ಅನಿರುದ್ಧ || ||೧೯-೦೧||

ಐದು ಕಾರಣರೂಪ ಇಪ್ಪತ್ತೈದು ಕಾರ್ಯಗಳೆನಿಸುವುವು ಆ |
ರೈದುರೂಪದಿ ರಮಿಸುತಿಪ್ಪನು ಈ ಚರಾಚರದಿ ||
ಭೇದವರ್ಜಿತ ಮೂರ್ಜಗಜ್ಜನ್ಮಾದಿ ಕಾರಣಮುಕ್ತಿದಾಯಕ |
ಸ್ವೋದರದೊಳಿಟ್ಟೆಲ್ಲರನು ಸಂತೈಪ ಸರ್ವಜ್ಞ || ||೧೯-೦೨||

ಕಾರ್ಯ ಕಾರಣ ಕರ್ತೃಗಳೊಳು ಸ್ವಭಾರ್ಯರಿಂದೊಡಗೂಡಿ ಕಪಿಲಾ |
ಚಾರ್ಯ ಕ್ರೀಡಿಸುತಿಪ್ಪ ತನ್ನೊಳು ತಾನೆ ಸ್ವೇಚ್ಛೆಯಲಿ ||
ಪ್ರೇರ್ಯನಲ್ಲಿ ರಮಾಬ್ಜಭವ ಭವರಾರ್ಯ ರಕ್ಷಿಸಿ ಶಿಕ್ಷಿಸುವನು ಸ್ವ |
ವೀರ್ಯದಿಂದಲಿ ದಿವಿಜದಾನವತತಿಯನನುದಿನದಿ || ||೧೯-೦೩||

ಈ ಸಮಸ್ತ ಜಗತ್ತಿನೊಳಗಾಕಾಶದೊಳಿರುತಿಪ್ಪ ವ್ಯಾಪ್ತಾ |
ವೇಶನವತಾರಾಂತರಾತ್ಮಕನಾಗಿ ಪರಮಾತ್ಮ ||
ನಾಶರಹಿತ ಜಗತ್ತಿನೊಳಗವಕಾಶದನು ತಾನಾಗಿ ಯೋಗೀ |
ಶಾಶ್ರಯಸ್ಥಿತ ತನ್ನೊಳೆಲ್ಲರನಿಟ್ಟು ಸಲಹುವನು || ||೧೯-೦೪||

ದಾರುಪಾಷಾಣಗತ ಪಾವಕ | ಬೇರೆಬೇರಿಪ್ಪಂತೆ ಕಾರಣ |
ಕಾರ್ಯಗಳ ಒಳಗಿದ್ದು ಕಾರಣಕಾರ್ಯನೆಂದೆನಿಸಿ ||
ತೋರಿಕೊಳ್ಳದೆ ಎಲ್ಲರೊಳು ವ್ಯಾಪಾರಮಾಡುವ ಯೋಗ್ಯತೆಗಳನು |
ಸಾರ ಫಲಗಳನುಣಿಸಿ ಸಂತೈಸುವ ಕೃಪಾಸಾಂದ್ರ || ||೧೯-೦೫||

ಊರ್ಮಿಗಳವೋಲಿಪ್ಪ ಕರ್ಮ ವಿಕರ್ಮ ಜನ್ಯ ಫಲಾಫಲಂಗಳ |
ನಿರ್ಮಲಾತ್ಮಕನು ಮಾಡಿ ಮಾಡಿಸಿ ಉಂಡುಣಿಸುತಿಪ್ಪ ||
ನಿರ್ಮಮ ನಿರಾಮಯ ನಿರಾಶ್ರಯ | ಧರ್ಮವಿದ್ಧರ್ಮಾತ್ಮ ಧರ್ಮಗ |
ದುರ್ಮತಿಯ ಜನರೊಲ್ಲನಪ್ರತಿಮಲ್ಲ ಶ್ರೀನಲ್ಲ || ||೧೯-೦೬||

ಜಲದ ವಡಬಾನಲಗಳಂಬುಧಿ । ಜಲವನುಂಬುವು ಅಬ್ದ ಮಳೆಗರೆ ।
ದಿಳೆಗೆ ಶಾಂತಿಯನೀವುದನಲನು ತಾನೆ ಭುಂಜಿಪುದು ॥
ತಿಳಿವುದೀಪರಿಯಲ್ಲಿ ಲಕುಮೀನಿಲಯ ಗುಣಕೃತ ಕರ್ಮಜ ಫಲಾ ।
ಫಲಗಳುಂಡುಣಿಸುವನು ಸರ್ವಗ ಸರ್ವ-ಜೀವರಿಗೆ ॥ ॥೧೯-೦೭॥

ಪುಸ್ತಕಗಳವಲೋಕಿಸುತ ಮಂತ್ರಸ್ತುತಿಗಳೇನಲೀನು ರಮಿಯುದ ।
ಯಾಸ್ತಮನ ಪರಿಯಂತ ಜಪತಪ ಮಾಡಿ ಫಲವೇನು ॥
ಹೃತ್ಸ್ಥ ಪರಮಾತ್ಮನೆ ಸಮಸ್ತಾವಸ್ಥೆಗಳೊಳಿದ್ದೆಲ್ಲರೊಳಗೆ ನಿ ।
ರಸ್ತಾಮನು ಮಾಡಿ ಮಾಡಿಪನೆಂದು ತಿಳಿಯದವ ॥ ॥೧೯-೦೮॥

ಮದ್ಯಭಾಂಡವ ದೇವನದಿಯೊಳಗದ್ದಿ ತೊಳೆಯಲು ನಿತ್ಯದಲಿ ಪರಿ ।
ಶುದ್ಧವಾಹೂದೆ ಎಂದಿಗಾದರು ಹರಿಪದಾಬ್ಜಗಳ ॥
ಬುದ್ಧಿಪೂರ್ವಕ ಭಜಿಸದವಗೆ ವಿರುದ್ಧವೆನಿಸುವುವೆಲ್ಲ ಕರ್ಮ ಸ ।
ಮೃದ್ಧಿಗಳು ದು:ಖವನೆ ಕೊಡುತಿಹವಧಮಜೀವರಿಗೆ ॥ ॥೧೯-೦೯॥

ಭಕ್ತಿಪೂರ್ವಕವಾಗಿ ಮುಕ್ತಾಮುಕ್ತನಿಯಾಮಕನ ಸರ್ವೋ ।
ದ್ರಿಕ್ತಮಹಿಮೆಗಳನವರತ ಕೊಂಡಾಡು ಮರೆಯದಲೆ ॥
ಸಕ್ತನಾಗದೆ ಲೋಕವಾರ್ತೆ ಪ್ರಸಕ್ತಿಗಳನೀಡಾಡಿ ಶ್ರುತಿಸ್ಮೃ ।
ತ್ಯುಕ್ತಕರ್ಮವ ಮಾಡುತಿರು ಹರಿಯಾಜ್ಞೆಯೆಂದರಿದು ॥ ॥೧೯-೧೦॥

ಲೋಪವಾದರು ಸರಿಯೆ ಕರ್ಮಜ । ಪಾಪಪುಣ್ಯಗಳೆರಡು ನಿನ್ನನು ।
ಲಿಪಿಸವು ನಿಷ್ಕಾಮಕನು ನೀನಾಗಿ ಮಾಡುತಿರೆ ॥
ಸೌಪರ್ಣವರವಹನ ನಿನ್ನ ಮಹಾಪರಾಧಗಳೆಣಿಸದಲೆ ಸ್ವ ।
ರ್ಗಾಪವರ್ಗದೊಳಿಟ್ಟು ಸಲಹುವ ಸತತ ಸುಖಸಾಂದ್ರ ॥ ॥೧೯-೧೧॥

ಸ್ವರತ ಸುಖಮಯ ಸುಲಭ ವಿಶ್ವಂಭರ ವಿಶೋಕ ಸುರಾಸುರಾರ್ಚಿತ ।
ಚರಣಯುಗ ಚಾರ್ವಂಗ ಶಾರ್ಙ್ಗ ಶರಣ್ಯ ಜಿತಮನ್ಯು ॥
ಪರಮಸುಂದರತರ ಪರಾತ್ಪರ । ಶರಣಜನಸುರಧೇನು ಶಾಶ್ವತ ।
ಕರುಣಿ ಕಂಜದಳಾಕ್ಷ ಕಾಯೆನೆ ಕಂಗೊಳಿಪ ಶೀಘ್ರ ॥೧೯-೧೨॥

ನಿರ್ಮಲನು ನೀನಾಗಿ ಕರ್ಮ ವಿಕರ್ಮಗಳನು ನಿರಂತರದಲಿ ಸು ।
ಧರ್ಮನಾಮಕಗರ್ಪಿಸುತ ನಿಷ್ಕಲುಷ ನೀನಾಗು ॥
ಭರ್ಮಗರ್ಭನ ಜನಕ ದಯದಲಿ । ದುರ್ಮತಿಗಳನು ಕೊಡದೆ ತನ್ನಯ ।
ಹರ್ಮ್ಯದೊಳಗಿಟ್ಟೆಲ್ಲ ಕಾಲದಿ ಕಾವ ಕೃಪೆಯಿಂದ ॥ ॥೧೯-೧೩॥

ಕಲ್ಪಕಲ್ಪದಿ ಶರಣಜನ ವರ । ಕಲ್ಪವೃಕ್ಷನು ತನ್ನ ನಿಜಸಂ ।
ಕಲ್ಪದನುಸಾರದಲಿ ಕೊಡುತಿಪ್ಪನು ಫಲಾಫಲವ ॥
ಅಲ್ಪಸುಖದಾಪೇಕ್ಷೆಯಿಂದಹಿ।ತಲ್ಪನಾರಾಧಿಸದಿರೆಂದಿಗು ।
ಶಿಲ್ಪಿಗನ ಕೈಸಿಕ್ಕ ಶಿಲೆಯಂದದಲಿ ಸಂತೈಪ ॥ ||೧೯-೧೪||

ದೇಶಭೇದಾಕಾಶದಂದದಿ । ವಾಸುದೇವನು ಸರ್ವಭೂತನಿ ।
ವಾಸನೆನಿಸಿ ಚರಾಚರಾತ್ಮಕನೆಂದು ಕರೆಸುವನು ॥
ದ್ವೇಷಸ್ನೇಹೋದಾಸೀನಗಳಿ।ಲ್ಲೀಶರೀರಗಳೊಳಗೆ ಆವರೋ ।
ವಾಸನೆಗಳಂದದಲಿ ಫಲವೀವನು ಪರಬ್ರಹ್ಮ ॥ ||೧೯-೧೫||

ಸಂಚಿತಾಗಾಮಿಗಳ ಕರ್ಮ ವಿ।ರಿಂಚಿಜನಕನ ಭಜಿಸೆ ಕೆಡುವವು ।
ಮಿಂಚಿನಂದದಿ ಪೊಳೆವ ಪುರುಷೋತ್ತಮ ಹೃದಂಬರದಿ ॥
ವಂಚಿಸುವ ಜನರೊಲ್ಲ ಶ್ರೀವತ್ಸಾಂಚಿತ ಸುಸದ್ವಕ್ಷ ತಾ ನಿ ।
ಷ್ಕಿಂಚನ ಜನಪ್ರಿಯ ಸುರಮುನಿಗೇಯ ಶುಭಕಾಯ ॥ ||೧೯-೧೬||

ಕಾಲ ದ್ರವ್ಯ ಸುಕರ್ಮ ಶುದ್ಧಿಯ । ಪೇಳುವರು ಅಲ್ಪರಿಗೆ ಇವು ನಿ ।
ರ್ಮೂಲಗೈಸವು ಎಲ್ಲ ಪಾಪಗಳೆಲ್ಲ ಕಾಲದಲಿ ॥
ತೈಲಧಾರೆಯಂತವನ ಪದ । ಓಲಯಿಸಿ ತುತಿಸದಲೆ ನಿತ್ಯದಿ ।
ಬಾಲಿಶರು ಕರ್ಮಾದಿಗಳೆ ತಾರಕವೆನುತಲಿಹರು ॥ ||೧೯-೧೭||

ಕಮಲಸಂಭವ ಶರ್ವಶಕ್ರಾದ್ಯಮರರೆಲ್ಲರು ಇವನ ದುರತಿ ।
ಕ್ರಮ ಮಹಿಮೆಗಳ ಮನವಚನದಿಂ ಪ್ರಾಂತಗಾಣದಲೆ ॥
ಶ್ರಮಿತರಾಗಿ ಪದಾಬ್ಜಕಲ್ಪ।ದ್ರುಮದ ನೆಳಲಾಶ್ರಯಿಸಿ ಲಕ್ಷ್ಮೀ ।
ರಮಣ ಸಂತೈಸೆಂದು ಪ್ರಾರ್ಥಿಪರತಿಭಕುತಿಯಿಂದ ॥ ||೧೯-೧೮||

ವಾರಿಚರವೆನಿಸುವವು ದರ್ದುರ।ತಾರಕಗಳಿಂದರಿದು ಭೇಕವ ।
ಸೇರಿ ಜಲಧಿಯ ದಾಟುವೆನು ಎಂಬುವನ ತೆರನಂತೆ ॥
ತಾರತಮ್ಯಜ್ಞಾನಶೂನ್ಯರು । ಸೂರಿಗಮ್ಯನ ತಿಳಿಯಲರಿಯದೆ ।
ಸೌರ ಶೈವಮತಾನುಗರನನುಸರಿಸಿ ಕೆಡುತಿಹರು ॥ ||೧೯-೧೯||

ಕ್ಷುಧೆಯಗೋಸುಗ ಪೋಗಿ ಕಾನನ । ಬದರಿಫಲಗಳಪೇಕ್ಷೆಯಿಂದಲಿ ।
ಪೊದೆಯೊಳಗೆ ಸಿಗಬಿದ್ದು ಬಾಯ್ದರದವನ ತೆರನಂತೆ ॥
ವಿಧಿಪಿತನ ಪೂಜಿಸದೆ ನಿನ್ನಯ । ಉದರಗೋಸುಗ ಸಾಧುಲಿಂಗ ।
ಪ್ರದರುಶಕರಾರಾಧಿಸುತ ಬಳಲದಿರು ಭವದೊಳಗೆ ॥ ||೧೯-೨೦||

ಕ್ಷೋಣಿಪತಿಸುತ-ನೆನಿಸಿ ಕೈ ದುಗ್ಗಾಣಿಗೊಡ್ಡುವ ತೆರದಿ ಸುಮನಸ ।
ಧೇನು ಮನೆಯೊಳಗಿರಲು ಗೋಮಯ ಬಯಸುವಂದದಲಿ ॥
ವೇಣುಗಾನಪ್ರಿಯನ ಆಹಿಕ ಸುಖಾನುಭವ ಬೇಡದಲೆ ಲಕುಮೀ ।
ಪ್ರಾಣನಾಥನ ಪಾದಭಕುತಿಯ ಬೇಡು ಕೊಂಡಾಡು ॥ ||೧೯-೨೦||

ಜ್ಞಾನ ಜ್ಞೇಯ ಜ್ಞಾತೃವೆಂಬಭಿಧಾನದಿಂ ಬುದ್ಧ್ಯಬ್ಧಿಗಳಧಿ ।
ಷ್ಠಾನದಲಿ ನೆಲೆಸಿದ್ದು ಕರೆಸುತ ತತ್ತದಾಹ್ವಯದಿ ॥
ಭಾನುಮಂಡಲಗ ಪ್ರದರ್ಶಕ । ತಾನೆನಿಸಿ ವಶನಾಗುವನು ಶುಕ ।
ಶೌನಕಾದಿಮುನೀಂದ್ರಹೃದಯಾಕಾಶಗತಚಂದ್ರ ॥ ||೧೯-೨೧||

ಉದಯವ್ಯಾಪಿನಿ ದರ್ಶ ಪೌರ್ಣಿಮಾವಧಿಕಯಾಮವು ಶ್ರವಣವಭಿಜಿತು ।
ಸದನವೈದಿರೆ ಮಾಳ್ಪ ತೆರದಿಂದದಲಿ ಹರಿಸೇವೆ ॥
ವಿಧಿನಿಷೇಧಗಳೇನು ನೋಡದೆ । ವಿಧಿಸುತಿರು ನಿತ್ಯದಲಿ ತನ್ನಯ ।
ಸದನದೊಳಗಿಂಬಿಟ್ಟು ಸಲಹುವ ಭಕ್ತವತ್ಸಲನು ॥ ||೧೯-೨೩||

ನಂದಿವಾಹನರಾತ್ರಿ ಸಾಧನಿ । ಬಂದ ದ್ವಾದಶಿ ದಶಮಿ ಪೈತ್ಯಕ ।
ಸಂಧಿಸಿಹ ಸಮಯದಲಿ ಶ್ರವಣವ ತ್ಯಜಿಸುವಂತೆ ಸದಾ ॥
ನಿಂದ್ಯರಿಂದಲಿ ಬಂದ ದ್ರವ್ಯವ । ಕಂಡೇರೇದು ನೋಡದಲೆ ಶ್ರೀಮದಾ ।
ನಂದತೀರ್ಥಾಂತರ್ಗತನ ಸರ್ವತ್ರ ಭಜಿಸುತಿರು ॥ ||೧೯-೨೪||

ಶ್ರೀಮನೋರಮ ಮೇರುತೀಶ ತ್ರಿಕಕುದ್ಧಾಮ ಸತ್ಕಲ್ಯಾಣಗುಣ ನಿ ।
ಸ್ಸೀಮ ಪಾವನನಾಮ ದಿವಿಜೋದ್ಧಾಮ ರಘುರಾಮ ॥
ಪ್ರೇಮಪೂರ್ವಕ ನಿತ್ಯ ತನ್ನ ಮಹಾಮಹಿಮೆಗಳ ತುತಿಸುವರಿಗೆ ಸು ।
ದಾಮಗೊಲಿದಂದದಲಿ ಅಖಿಳಾರ್ಥಗಳ ಕೊಡುತಿಪ್ಪ ॥ ||೧೯-೨೫||

ತಂದೆತಾಯ್ಗಳ ಕುರುಹನರಿಯದ । ಕಂದ ದೇಶಾಂತರದೊಳಗೆ ತ ।
ನ್ನಂದದಲಿ ಇಪ್ಪವರ ಜನನೀಜನಕರನು ಕಂಡು ॥
ಹಿಂದೆ ಎನ್ನನು ಪಡೆದವರು ಇವರಂದದಲಿ ಇಪ್ಪರೋ ನಾನವ ।
ರೆಂದು ಕಾಣುವೆನೆನುತ ಹುಡುಕುವ ತೆರದಿ ಕೋವಿದರು ॥ ||೧೯-೨೬||

ಶ್ರುತಿ ಪುರಾಣ ಸಮೂಹದೊಳು ಭಾರತ ಪ್ರತಿಪ್ರತಿ ಪದಗಳೊಳು ನಿ ।
ರ್ಜಿತನ ಗುಣರೂಪಗಳ ಹುಡುಕುತ ಪರಮಹರುಷದಲಿ ॥
ಮತಿಮತರು ಪ್ರತಿದಿವಸ ಸಾರಸ್ವತಸಮುದ್ರದಿ ಶಫರಿಯಂದದಿ ।
ಸತತ ಸಂಚರಿಸುವರು ಕಾಣುವ ಲವಲವಿಕೆಯಿಂದ ॥ ||೧೯-೨೭||

ಮತ್ಸ್ಯಕೇತನ ಜನಕ ಹರಿ ಶ್ರೀ।ವತ್ಸಲಾಂಛನ ನಿಜಶರಣಜನ ।
ವತ್ಸಲ ವರಾರೋಹ ವೈಕುಂಠಾಲಯನಿವಾಸಿ ॥
ಚಿತ್ಸುಖಪ್ರದ ಸಲಹೆನಲು ಗೋ।ವತ್ಸಧ್ವನಿಗೊದಗುವ ತೆರದಿ ಪರ ।
ಮೊತ್ಸಹದಿ ಬಂದೋದಗುವನು ನಿರ್ಮತ್ಸರರ ಬಳಿಗೆ ॥ ॥೧೯-೨೮॥

ಸೂರಿಗಳಿಗೆ ಸಮೀಪಗ ದುರಾ।ಚಾರಗಳಿಗೆಂದೆಂದು ದೂರಾ ।
ದ್ದೂರತರ ದುರ್ಲಭನೆನಿಸುವನು ದೈತ್ಯಸಂತತಿಗೆ ॥
ಸಾರಿಸಾರಿಗೆ ನೆನೆವವರ ಸಂ।ಸಾರವೆಂಬ ಮಹೋರಗಕೆ ಸ ।
ರ್ವಾರಿಯೆನಿಸಿ ಸದಾ ಸುಸೌಖ್ಯವ ನೀವ ಸುಜನರಿಗೆ ॥ ॥೧೯-೨೯॥

ಚಕ್ರಶಂಖಗದಾಬ್ಜಧರ ದುರ।ತಿಕ್ರಮ ದುರಾವಾಸ ವಿಧಿ ಶಿವ ।
ಶಕ್ರ ಸೂರ್ಯಾದ್ಯಮರಪೂಜ್ಯಪದಾಬ್ಜ ನಿರ್ಲಜ್ಜ ॥
ಶುಕ್ರಶಿಷ್ಯನ ಅಶ್ವಮೇಧ । ಪ್ರಕ್ರಿಯವ ಕೆಡಿಸಬ್ಜಜಾಂಡವ ।
ತಿಕ್ರಮಿಸಿ ಜಾಹ್ನವಿಯ ಪಡೆದ ತ್ರಿವಿಕ್ರಮಾಹ್ವಯನು ॥ ॥೧೯-೩೦॥

ಶಕ್ತರೆನಿಸುವರಿಲ್ಲ ಹರಿವ್ಯತಿ।ರಿಕ್ತ ಸುರಗಣದೊಳಗೆ ಸರ್ವೋ ।
ದ್ರಿಕ್ತನೆನಿಸುವ ಸರ್ವರಿಂದಲಿ ಸರ್ವಕಾಲದಲಿ ॥
ಭಕ್ತಿಪೂರ್ವಕವಾಗಿ ಅನ್ಯ ಪ್ರ।ಸಕ್ತಿಗಳನೀಡಾಡಿ ಪರಮಾ ।
ಸಕ್ತನಾಗಿರು ಹರಿಕಥಾಮೃತಪಾನ ವಿಷಯದಲಿ ॥ ॥೧೯-೩೧॥

ಬಲ್ಲನೆಂಬುವರಿಲ್ಲವೀತನ । ಒಲ್ಲನೆಂಬುವರಿಲ್ಲ ಲೋಕದೊ ।
ಳಿಲ್ಲದಿಹ ಸ್ಥಳವಿಲ್ಲ ಅಜ್ಞಾತಜನರಿಲ್ಲ ॥
ಬೆಲ್ಲದಚ್ಚಿನ ಬೊಂಬೆಯಂದದಿ । ಎಲ್ಲರೊಳಗಿರುತಿಪ್ಪ ಶ್ರೀ ಭೂ ।
ನಲ್ಲ ಇವಗೆಣೆಯಿಲ್ಲ ಅಪ್ರತಿಮಲ್ಲ ಜಗಕೆಲ್ಲ ॥ ॥೧೯-೩೨॥

ಪ್ರಣತಕಾಮದ ಭಕ್ತಚಿಂತಾ।ಮಣಿ ಮಣಿಮಯಾಭರಣಭೂಷಿತ ।
ಗುಣಿ ಗುಣತ್ರಯದೂರ ವರ್ಜಿತ ಗಹನಸನ್ಮಹಿಮ ॥
ಎಣಿಸ ಭಕ್ತರ ದೋಷಗಳ ಕುಂ।ಭಿಣಿಜೆಯಾಣ್ಮ ಶರಣ್ಯ ರಾಮಾ ।
ರ್ಪಣವೆನಲು ಕೈಗೊಂಡ ಶಬರಿಯ ಫಲವ ಪರಮಾತ್ಮ ॥ ॥೧೯-೩೩॥

ಶಬ್ದಗೋಚರ ಶಾರ್ವರೀಶರ । ಅಬ್ದವಾಹನನನುಜ ಯದುವಂ ।
ಶಾಬ್ಧಿಚಂದ್ರಮ ನಿರುಪಮ ಸುನಿಸ್ಸೀಮ ಸಮಿತ ಸಮ ॥
ಲಬ್ಧನಾಗುವ ತನ್ನವಗೆ ಪ್ರಾ।ರಬ್ಧಕರ್ಮಗಳುಣಿಸಿ ತೀವ್ರದಿ ।
ಕ್ಷುಬ್ಧವಾಹಕನಂತೆ ಬಿಡದಿಪ್ಪನು ದಯಾಸಾಂದ್ರ ॥ ॥೧೯-೩೪॥

ಶ್ರೀವಿರಿಂಚಾದ್ಯಮರವಂದಿತ । ಈ ವಸುಂಧರೆಯೊಳಗೆ ದೇವಕಿ ।
ದೇವಿಜಠರದೊಳವತರಿಸಿದನು ಅಜನು ಜನದಂತೆ ॥
ರೇವತಿರಮಣಾನುಜನು ಸ್ವ ಪಾದಾವಲಂಬಿಗಳನು ಸಲಹಿ ದೈ .
ತ್ಯಾವಳಿಯ ಸಂಹರಿಸಿದ ಜಗನ್ನಾಥವಿಠ್ಠಲನು ॥ ॥೧೯-೩೫॥

oooooooooooooooooooooooooooooooo